



## ಹಸಿರು ವನ

ಮಳೆಗಾಲದಲ್ಲಿ ಮಲೆನಾಡಿನ ಹೆಂಚಿನ ಮೇಲೆ ಪಾಚೀ ಸಸ್ಯ ಬೆಳೆದು ನಿಂತಿದ್ದು, ಸಿಂಗರಿಸಿದ ಉದ್ಯಾನವನದಂತೆ ಕಾಣುತ್ತಿದೆ. ಬೇಸಿಗೆಯಲ್ಲಿ ಗಾಳಿಯಲ್ಲಿ ತೂರಿ ಬಂದ ಬೀಜವು ಮಳೆ – ಬಿಸಿಲಿಗೆ ಮೈಯೊಡ್ಡಿ ನಾಲ್ಕು ತಿಂಗಳುಗಳ ಕಾಲ ಹಸಿರಾಗಿದ್ದು ನಂತರ ಬಿಸಿಲಿಗೆ ಬಾಡಿ ಹೋಗುತ್ತದೆ. ಗಿಡಗಳ ವಿಹಂಗಮ ನೋಟದಂತೆ ಭಾಸವಾಗುವ ಈ ಸಸ್ಯದ ವಿನ್ಯಾಸ ವಿಶಿಷ್ಟವಾಗಿ ಆಕರ್ಷಿಸುತ್ತದೆ.

**-ದೀಕ್ಷಾ ದತ್ತಾತ್ರೇಯ, ಯಲ್ಲಾಪುರ**



## ರಂಗಾಂತರಂಗ!

ಕುಂಚ ಕಲಾಕೇಸರಿಯ ಕೈಯಲ್ಲಿ ಮೈದಳೆದ ವಿವಿಧ ಬಣ್ಣಗಳ ಕಲಾಕುಸುಮದಂತಿರುವ ಈ ಸುಂದರಿ ಪ್ರಕೃತಿಯ ಕೊಡುಗೆ. ಪತಂಗದ ಜೀವನ ಚಕ್ರವೇ ಒಂದು ಸೋಜಿಗ. ನಮ್ಮ ಕಣ್ಣಿಗೆ ಕಾಣುವ ಪತಂಗ ತನ್ನ ಜೀವನ ಚಕ್ರದ ನಾಲ್ಕು ಹಂತಗಳನ್ನು ಹೊಂದುತ್ತದೆ. ಮೊಟ್ಟೆ, ಲಾರ್ವಾ, ಕೋಶಾವಸ್ಥೆ ಮತ್ತು ಕೀಟ. ಇದು ಪತಂಗದ ಮೂರನೆಯ ಹಂತ ಲಾರ್ವಾ.

**-ಬೀರಣ್ಣ ನಾಯಕ ಮೊಗಟಾ**

## ಹಂದಿಗಳಿಗೆ ಪೂಜೆ

ರಾಯಚೂರು ನಗರದ ತಿಮ್ಮಾಪುರ ಪೇಟೆಯ ಶ್ರೀ ಬಾಲಮಾರೆಮ್ಮ ದೇವಿ ಜಾತ್ರೆಯಲ್ಲಿ ಹಂದಿಗಳಿಗೆ ಶೃಂಗಾರ ಮಾಡಿ, ಆನಂತರ ಪೂಜೆ ಸಲ್ಲಿಸುವುದು ವಿಶೇಷ. ಈ ಜಾತ್ರೆಯಲ್ಲಿ ಮೆರವಣಿಗೆಯ ಮೂಲಕ ಹಂದಿಗಳನ್ನು ಕರೆದು ಪ್ರದಕ್ಷಿಣೆ ಮಾಡುವ ಮೂಲಕ ಪೂಜಿಸಲಾಗುತ್ತದೆ. ರಥೋತ್ಸವ ಮುನ್ನಾದಿನ ಹಂದಿಗಳಿಗೆ ಬಣ್ಣಗಳಿಂದ ಅಲಂಕರಿಸಿ ಓಡಿಸಿಕೊಂಡು ಬರುವ ಮೂಲಕ ಹರಕೆ ತೀರಿಸುತ್ತಾರೆ. ಈ ಬಾರಿ ಬೇರೆ ಕಡೆಯಿಂದ ಖರೀದಿಸಿ ತಂದ ಗಜಗಾತ್ರದ ಹಂದಿಗಳನ್ನು ನೋಡಲು ಜನ ಸೇರಿದ್ದರು.

**-ಈರಣ್ಣ ಬೆಂಗಾಲಿ, ರಾಯಚೂರು**

